# 2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ
# ಕ್ರಿಮಿನಲ್ ಪ್ರಕರಣ ಸಂಖ್ಯೆ : 517/2022

**ಪಿರ್ಯಾದುದಾರರು :** ತಾವರೆಕೆರೆ ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿ :** ದಿನೇಶ್ ಎಸ್ ಗೌಡ ಬಿನ್ ಶಿವಣ್ಣ
ವಯಸು 33 ವರ್ಷ
ವಾಸಃ ದಿನೇಶ್ ಎಂ.ಎಸ್ ನಂ.201,
ಮಂಜುಳ ಮಹಲ್, 5 ನೇ ಮುಖ್ಯ ರಸ್ತೆ,
4 ನೇ ಕ್ರಾಸ್, ಐ. ಟಿ. ಐ ಲೇ ಔಟ್,
ಮಲ್ಲತ್ತಹಳ್ಳಿ, ನಾಗರಬಾವಿ,
ಬೆಂಗಳೂರು ಸಿ.ಟಿ.

## ದೋಷಾರೋಪಣೆ

ಶ್ರೀಮತಿ. ರಂಜಿತ ಜಿ.ಬಿ, 2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮಾಗಡಿ ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮ ಮೇಲೆ ಹೊರೆಸುವ ಆಪಾದನೆ.

**ದಿನೇಶ್ ಎಸ್ ಗೌಡ ಎಂಬ ನೀವು,**

ತಾವರೆಕೆರೆ ಪೋಲೀಸ್ ಠಾಣೆಯ ಸರಹದ್ದು, ಬೆಂಗಳೂರು ದಕ್ಷಿಣ ತಾಃ ತಾವರೆಕೆರೆ ಹೋಬಳಿ, ಪೆದ್ದನಹಳ್ಳಿ ರಸ್ತೆ ಪಕ್ಕದ ದೇವಮಾಚೋಹಳ್ಳಿ ಗ್ರಾಮ ಸರ್ವೆ ನಂ.27/1, 27/2, 27/3 ರಲ್ಲಿರುವ ಬೃಂಧಾವನ ಪ್ರಾಪರ್ಟೀಸ್ ಬಡಾವಣೆಯಲ್ಲಿ ಮಾಡಿರುವ ನಿವೇಶನದಲ್ಲಿ ನೀವು ಚಾಸಾ-1 ರವರಿಗೆ ಸೈಟ್ ನಂ.21 ನ್ನು ಮಾರಾಟ ಮಾಡಿ 2,00,000/- ಹಣವನ್ನು ನಗದು ರೂಪದಲ್ಲಿ ಪಡೆದು ದಿಃ07-04-2021 ರಂದು ಕ್ರಯದ ಕರಾರು ಪತ್ರ ಮಾಡಿಕೊಟ್ಟು, ಸಾಕ್ಷಿ-2 ರವರಿಗೆ ಸದರಿ ನಿವೇಶನದ ಸೈಟ್ ನಂ.20 ನ್ನು ಮಾರಾಟ ಮಾಡಿ ರೂ. 2,00,000/- ಹಣವನ್ನು ನಗದು ರೂಪದಲ್ಲಿ ಪಡೆದುಕೊಂಡು ದಿನಾಂಕ 07-04-2021 ರಂದು ಚಾಸಾ-3 ಮತ್ತು 4 ರ ಸಮಕ್ಷಮ ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದು, ಚಾಸಾ-1 ಮತ್ತು 2 ರವರಿಂದ ಒಟ್ಟು 4 ಲಕ್ಷ ರೂಪಾಯಿಗಳನ್ನು ನಗದು ರೂಪದಲ್ಲಿ ಪಡೆದುಕೊಂಡು ಸೈಟುಗಳನ್ನು ರಿಜಿಸ್ಟರ್ ಮಾಡಿಕೊಡದೆ ಹಣವನ್ನು ಸಹ ವಾಪಸ್ ಕೊಡದೆ ನಂಬಿಕೆ ದ್ರೋಹ ಮಾಡಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ-406 ರೀತ್ಯ ಶಿಕ್ಷಾರ್ಹ ಅಪರಾಧವಾಗಿದ್ದು,

ನನ್ನ ಸಂಜ್ಞೆಗೆ ಒಳಪಡುತ್ತದೆ.

ಕೊನೆಯದಾಗಿ, ನೀವು ದೇವಮಾಚೋಹಳ್ಳಿ ಗ್ರಾಮ ಸರ್ವೆ ನಂ.27/1, 27/2, 27/3 ರಲ್ಲಿರುವ ಬೃಂಧಾವನ ಪ್ರಾಪರ್ಟೀಸ್ ಬಡಾವಣೆಯಲ್ಲಿ ಮಾಡಿರುವ ನಿವೇಶನದಲ್ಲಿ ಸೈಟ್ ನಂ.21 ನ್ನು ಚಾಸಾ-1 ರವರಿಗೆ ಮಾರಾಟ ಮಾಡಿ ರೂ. 2,00,000/- ಹಣವನ್ನು ಪಡೆದು ದಿ.07-04-2021 ರಂದು ಕ್ರಯದ ಕರಾರುಪತ್ರ ಮಾಡಿಕೊಟ್ಟು, ಸಾಕ್ಷಿ-2 ರವರಿಗೆ ಸದರಿ ನಿವೇಶನದ ಸೈಟ್ ನಂ.20 ನ್ನು ಮಾರಾಟ ಮಾಡಿ ರೂ. 2,00,000/- ಹಣವನ್ನು ಪಡೆದು ದಿನಾಂಕ 07-04-2021 ರಂದು ಚಾಸಾ-3 ಮತ್ತು 4 ರವರ ಸಮಕ್ಷಮ ಕ್ರಯದ ಕರಾರುಪತ್ರ ಮಾಡಿಕೊಟ್ಟು ಚಾಸಾ-1 ಮತ್ತು 2 ರವರಿಂದ ಒಟ್ಟು 4,00,000/- ರೂಗಳನ್ನು ನಗದು ರೂಪದಲ್ಲ ಪಡೆದುಕೊಂಡು ಸೈಟುಗಳನ್ನು ರಿಜಿಸ್ಟರ್ ಮಾಡಿಕೊಡದೆ ಹಣವನ್ನು ಸಹ ವಾಪಸ್ ಕೊಡದೆ ನಂಬಿಕೆ ದ್ರೋಹ ಮಾಡಿ, ಮೋಸ ಮಾಡಲು ಪ್ರಯತ್ನಿಸಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ-420 ರೀತ್ಯ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

**ಪ್ರಶ್ನೆ-1 : ನಿಮ್ಮ ಮೇಲಿನ ಆಪಾದನೆಯ ಸಾರವನ್ನು ಓದಿ, ವಿವರಿಸಿ ಹೇಳಿದಾಗ ನಿಮಗೆ ಅರ್ಥವಾಯಿತೆ?**

**ಆರೋಪಿ-ರವರ ಉತ್ತರ :**

**ಪ್ರಶ್ನೆ-2 : ನೀವು ನಿಮ್ಮ ತಪ್ಪನ್ನು ಒಪ್ಪುಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಇಚ್ಛಿಸುವಿವರೋ ?**

**ಆರೋಪಿ ರವರ ಉತ್ತರ :**

**ಈ ಮೇಲ್ಕಂಡ ಆಪಾದನೆಗಳನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುವುದಾಗಿ ಈ ಮೂಲಕ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ.**

**(ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ ಸರಿ ಇದೆಯೆಂದು ನನ್ನ ಸಮಕ್ಷಮ ದಿನಾಂಕ 20-03-2024 ರಂದು ಸಹಿಯನ್ನು ಮಾಡಿರುತ್ತೇನೆ.)**

**(ರಂಜಿತ ಜಿ.ಬಿ)**
**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಮಾಗಡಿ.**

**ಆರೋಪಿಯ ಸಹಿ**

**ಆರೋಪಿಗಳ ಸಹಿಃ**